ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 28 ಸಿಡಿಸಿ(1) 2016-17

ನಿರ್ದೇಶಕರ ಕಾರ್ಯಾಲಯ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 08-08-2016.

ಇವರಿಗೆ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬಹು ಮಹಡಿ ಕಟ್ಟಡಗಳು,
ಬೆಂಗಳೂರು-560 001.

ಮಾನ್ಯರೇ,

ವಿಷಯ: ಡಿಪ್ಲೊಮಾ ಕ್ಯಾರಿ ಓವರ್ ಸಂಬಂಧ ವಿವಿಧ ವಿದ್ಯಾರ್ಥಿ ಸಂಘಟಣೆಗಳು ಮಾಡಿರುವ ಮನವಿಗಳಿಗೆ ಸ್ಪಷ್ಟೀಕರಣ

ಉಲ್ಲೇಖ: ವಿವಿಧ ವಿದ್ಯಾರ್ಥಿ ಸಂಘಟಣೆಗಳು ಡಿಪ್ಲೊಮಾ ಕ್ಯಾರಿ ಓವರ್ ಸಂಬಂಧ ಮಾಡಿರುವ ಮನವಿಗಳು ಮತ್ತು ಪತ್ರಿಕಾ ಹೇಳಿಕೆಗಳು.

2009-10ನೇ ಸಾಲಿನಿಂದ ಅಳವಡಿಸಿರುವ ಡಿಪ್ಲೊಮಾ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 178 ಟಿಪಿಇ 2009. ದಿ:01-08-2009ರಲ್ಲಿರುವ "Regulations and Guidelines for Diploma courses as per the curriculum-C-09/10" ಪ್ರಕಾರ ಹಿಂದಿನ ವರ್ಷಗಳ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

ಸದರಿ ಕ್ಯಾರಿ ಓವರ್ ನಿಯಮಾವಳಿಗಳನ್ನು ಸಡಿಲಿಸಲು ಮತ್ತು ಪೂರ್ಣ ಕ್ಯಾರಿಓವರ್ ವಿಸ್ತರಿಸುವಂತೆ ಕೋರಿ, 2012ರ ಸಾಲಿನಲ್ಲಿ ಕೆಲವು ವಿದ್ಯಾರ್ಥಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:32330-32437/2012 (ಇಡಿಎನ್) ಹಾಗೂ ಇತರೆ ರಿಟ್ ಪಿಟಿಷನ್ ಗಳಲ್ಲಿ ದಾವೆ ಹೂಡಿದ್ದರು. ಈ ಕುರಿತಂತೆ ದಿನಾಂಕ:10-09-2012 ರಂದು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು, ಏಕ ಸದಸ್ಯ ಪೀಠವು ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಂತೆ 2013-14ನೇ ಸಾಲಿನಿಂದ ಕ್ಯಾರಿ ಓವರ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿ ತೀರ್ಪನ್ನು ನೀಡಿತ್ತು.

ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠದ ತೀರ್ಪಿನ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡದಲ್ಲಿ ದ್ವಿಸದಸ್ಯ ಪೀಠದ ಮುಂದೆ ಕೆಲವು ವಿದ್ಯಾರ್ಥಿಗಳು ರಿಟ್ ಅಪೀಲ್ ಸಂಖ್ಯೆ: 31203/2012ನ್ನು ದಾಖಲಿಸಿ, ಪೂರ್ಣ ಕ್ಯಾರಿ ಓವರ್ ಸೌಲಭ್ಯವನ್ನು ನೀಡುವಂತೆ ಮೇಲ್ಮನವಿ ಸಲ್ಲಿಸಿದ್ದರು. ಸದರಿ

ಮೇಲ್ಮನವಿಯನ್ನು ವಿಚಾರಣೆಗೆ ಒಳಪಡಿಸಿದ, ದ್ವಿಸದಸ್ಯ ಪೀಠವು ದಿನಾಂಕ 6-12-2012 ರಲ್ಲಿ ತೀರ್ಪನ್ನು ನೀಡಿ, ದಿನಾಂಕ 10-09-2012 ರಲ್ಲಿ ಏಕ ಸದಸ್ಯ ಪೀಠ ನೀಡಿದ ತೀರ್ಪನ್ನು ಎತ್ತಿ ಹಿಡಿದು, 2013-14ನೇ ಸಾಲಿನಿಂದ ಕಡ್ಡಾಯವಾಗಿ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ನೀಡುವಂತೆ ತಿಳಿಸಿ ಅಪೀಲ್‌ನ್ನು ತಿರಸ್ಕರಿಸಿ, ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ತಿಳಿಸಿ ತೀರ್ಪನ್ನು ನೀಡಿತ್ತು.

ಮಾನ್ಯ ಉಚ್ಛ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳ ಬಗ್ಗೆ ರಾಜ್ಯದ ಅಂದಿನ ಮಾನ್ಯ ಅಡ್ವೋಕೇಟ್ ಜನರಲ್‌ರವರು ಅಭಿಪ್ರಾಯವನ್ನು ನೀಡುತ್ತಾ, ಮಾನ್ಯ ಉಚ್ಛ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳನ್ನು ಪಾಲಿಸುವುದು ಕಡ್ಡಾಯವಾಗಿದ್ದು, ಇದಕ್ಕೆ ತಪ್ಪಿದ್ದಲ್ಲಿ ನ್ಯಾಯಾಲಯ ನಿಂದನೆಯಾಗಬಹುದೆಂದು ಎಚ್ಚರಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳಲು ಹಾಗು ಈ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ಸಂದೇಶವನ್ನು ನೀಡಿ, ಕ್ಯಾರಿ ಓವರ್ ಬಗ್ಗೆ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ನೀಡಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. (ಅನುಬಂಧ-1)

ಕರ್ನಾಟಕ ಖಾಸಗಿ ಪಾಲಿಟೆಕ್ನಿಕ್ ಅಸೋಸಿಯೇಶನ್ ಹಾಗು ಇನ್ನಿತರರು, 2014ನೇ ಸಾಲಿನಲ್ಲಿ ಡಿಪ್ಲೊಮಾ ಕ್ಯಾರಿ ಓವರ್ ನಿಯಮಾವಳಿಗಳ ಸಂಬಂಧಿಸಿದಂತೆ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ. 35484-490/2014ರಲ್ಲಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪೂರ್ಣ ಕ್ಯಾರಿ ಓವರ್ ಸೌಲಭ್ಯ ನೀಡುವಂತೆ ಕೋರಿದ್ದರು. ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:32330-32437/2012 (ಇಡಿಎನ್) ಹಾಗು ರಿಟ್ ಅಪೀಲ್ ಸಂಖ್ಯೆ: 31203/2012ರಲ್ಲಿ ಅದಾಗಲೇ ನೀಡಿರುವ ತೀರ್ಪನ್ನು ಉಲ್ಲೇಖಿಸಿ, ವಿದ್ಯಾರ್ಥಿಗಳು ಕ್ಯಾರಿ ಓವರ್ ಬಗ್ಗೆ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯುವ ನಿಯಮಾವಳಿಗಳಿಗೆ ಒಳಪಟ್ಟಿದ್ದು, ನ್ಯಾಯಾಲಯವು ಈ ಬಗ್ಗೆ ಯಾವುದೇ ನಿರ್ದೇಶನವನ್ನು ನೀಡಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿ, ರಿಟ್ ಅರ್ಜಿಯನ್ನು ವಿಲೆಮಾಡಿತ್ತು.

ಆದ್ದರಿಂದ ಡಿಪ್ಲೊಮಾ ಕ್ಯಾರಿ ಓವರ್ ನಿಯಮಾವಳಿಗಳ ಬಗ್ಗೆ ಮಾನ್ಯ ನ್ಯಾಯಾಲಯಗಳ ತೀರ್ಪಿನಂತೆ ನಡೆಯಬೇಕಾಗಿದ್ದು, ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚು ಗಮನ ನೀಡಿ, ಫೇಲಾದ ವಿಷಯಗಳಲ್ಲಿ ಓದಿ ಮತ್ತೊಮ್ಮೆ ಪರೀಕ್ಷೆಗಳನ್ನು ಬರೆದು ಪಾಸಾಗಿ, ಕ್ಯಾರಿ ಓವರ್ ನಿಯಮಾವಳಿಗಳನ್ನು ಪಾಲಿಸಿ ವಿದ್ಯಾಭ್ಯಾಸವನ್ನು ಮುಂದುವರೆಸಬಹುದಾಗಿದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು.

**ಪ್ರತಿ:**

1. **ಆಪ್ತ ಕಾರ್ಯದರ್ಶಿಗಳು, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.- ಮಾಹಿತಿಗಾಗಿ.**
2. ಇ-ಗವರ್ನೆನ್ಸ್ ವಿಭಾಗ, ತಾ.ಶಿ. ನಿರ್ದೇಶನಾಲಯ - ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
3. ನಿರ್ದೇಶಕರ ಆಪ್ತ ಶಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 166 ಟಿಪಿಇ 2013

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ, 6ನೇ ಮಹಡಿ,
ಬೆಂಗಳೂರು, ದಿನಾಂಕ: 11-10-2013.

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು - 560 001.

ಇವರಿಗೆ,

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560 001.

J.D (CDE)
11/10/XIII

ಮಾನ್ಯರೇ,

ವಿಷಯ: ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸುಗಳ ಕ್ಯಾರಿ ಓವರ್ ಸಂಬಂಧ ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ತೀರ್ಪಿನ ಕುರಿತು ಪತ್ರಿಕಾ ಪ್ರಕಟಣೆ ನೀಡುವ ಬಗ್ಗೆ.

ಉಲ್ಲೇಖ: 01. ಪತ್ರಸಂಖ್ಯೆ: ತಾಂಶಿನಿ/48/ಸಿಡಿಬಿ(1)/2013-14, ದಿನಾಂಕ: 28.09.2013.
02. ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯದ ಪತ್ರ, ದಿನಾಂಕ: 08.10.2013.

(((O)))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸುಗಳ ಕ್ಯಾರಿ ಓವರ್ ಸಂಬಂಧ ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ತೀರ್ಪಿನ ಕುರಿತು ಅಡ್ವೋಕೇಟ್ ಜನರಲ್‌ರವರ ದಿನಾಂಕ: 08.10.2013ರಂದು ನೀಡಿರುವ ಅಭಿಪ್ರಾಯದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ಅಭಿಪ್ರಾಯದನ್ವಯ ಪರಿಶೀಲಿಸಿ, ಕೂಡಲೇ 'ಪತ್ರಿಕಾ ಪ್ರಕಟಣೆ'ಯನ್ನು ಹೊರಡಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ನಾಗಭೂಷಣ)
ಸರ್ಕಾರದ ಅಧೀನಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ED 166 TPE 2013

---

## OPINION

The matter relates to the interpretation of the Regulation and Guidelines in the Diploma Courses as per the Curriculam-C-09/10 with effect from the academic year 2009-10. In particular, the Regulation pressed into service is Regulation 8 which confers the eligibility for promotion of students of Diploma Courses from semester to semester. The said Regulation reads as follows:

> **"8. Eligibility and Promotion for the Examinations:**
>
> **8.1. There shall not be any restriction for promotion from odd semester to even semester, provided the candidate has registered his/her name for the examination for the semester and has fulfilled the attendance requirement.**
>
> **8.2. A candidate is eligible for promotion from even semester to odd semester (i.e. to next academic year) provided, the candidate has not failed in more than four subjects of lower semester examinations.**
>
> **For example:**
>
> **a) A candidate seeking eligibility to 3rd semester should not have failed in more than 4 subjects of first and second semesters put together.**
>
> **b) A candidate seeking eligibility to 5th semester should not have failed in**

**more than 4 subjects of 1st to 4th semesters put together."**

2. Certain students approached the Hon'ble High Court aggrieved by the carryover system that was so introduced. During the pendency of the writ petition on behalf of the State of Karnataka and the Director for Technical Education, a relaxation was made permitting the students to move over to the next semester. A liberal stand was taken permitting the students to move forward even when they have failed upto ten subjects. Be that as it may, the Hon'ble High Court accepted the concession shown and directed promotion to be given even if they failed upto ten subjects. However, the Hon'ble High Court in the same Order issued the following direction, which was a clear reminder to the State and the Director that there shall be no relaxation in the standard of education stipulated by Regulation No.8. The said direction reads as follows:

> **"The respondent-State is further directed to issue appropriate order declaring that the promotion of the aforesaid students to higher semesters during the academic year 2013-2014 in the Diploma Course, shall be strictly in accordance with the Government Order dated 1-8-2009."**

**[See the Order of the Hon'ble High Court dated 10-9-2012 made in Writ Petition Nos.32330 – 32437 of 2012 (EDN-AD)].**

3. Some more students approached the High Court of Karnataka Circuit Bench, Dharwad claiming promotion even when

they failed in more than ten subjects. That writ petition was not entertained by the High Court and relief was declined in terms of the Order dated 16-11-2012 made in Writ Petition Nos.69603-69643/2012 and other connected matters. Against the said decision, a Writ Appeal in W.A.Nos.31203/2012 was preferred and by an Order dated 6-12-2012, the said Appeal along with connected Appeals were dismissed upholding the Order of the learned single Judge declining relief to the second batch of students.

4. It is in this backdrop, earlier an opinion was sought and the learned Additional Advocate General by his Opinion dated 13-8-2013 has already furnished the necessary Opinion in the matter that Regulation No.8 shall be strictly complied with.

5. A P.I.L. was filed in Writ Petition No.39659/2013 on behalf of the students and the said Writ Petition was dismissed as withdrawn. However, by an Order dated 11-9-2013 made in the said writ petition, liberty was reserved for the students to make a representation in the following terms:

> **"Dismissed as withdrawn with liberty to make representation in respect of the grievances sought to be made out in the petition."**

6. While, the Hon'ble High Court has given liberty to make a representation to the students, no corresponding liberty was given to the State or the Director to relax the standards notwithstanding the directions issued by the High Court in the earlier batch of writ petitions. It is in this backdrop, I am constrained to give the following Opinion.

7. It is evident that failure to adhere to the rule of law in general and Regulation 8 in particular, has encouraged the students either to repeatedly approach the Court or to approach the State/Director to relax the Rules. This is a very unhealthy trend among the students. The relaxation given in the past might have encouraged the students to indulge in this kind of petitioning time and again. While the Department should have strictly enforced the Regulation and driven home the message that the students shall abide by the Regulation under all circumstances and no relaxation be given in the standard of education that is stipulated under the Regulation. Be that as it may, the State is bound by the direction issued by the Hon'ble High Court in the earlier batch of Writ Petitions vide Order dated 10-9-2012 as extracted above.

8. In the light of these facts, I am of the considered Opinion that relaxation of the standards contrary to the directions issued by the Hon'ble High Court in its Order dated 10-9-2012 will be a willful disobedience of the Order attracting Contempt of Court

proceedings. It is therefore, directed that the Regulations be strictly adhered to in the matter of providing carryover system to the students of polytechnic strictly in terms of the Regulation and Guidelines in the Diploma Courses as per the Curriculam-C-09/10.

8th October 2013

(PROF. RAVIVARMA KUMAR)
ADVOCATE GENERAL

No 98/AGP/2013-14 dt 9-10-2013

The Principal Secretary to Government,
Education Department (Higher Education)]

AGRK-O3

PRSED/F.......
Received on 9/10/13